ಶ್ರೀ ಜಗದೀಶ್ ಶೆಟ್ಟರ್:– ನಾಳೆ Question hour ಆದ ತಕ್ಷಣ ಇದನ್ನು ತೆಗೆದುಕೊಳ್ಳುತ್ತೇನೆ.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು:– ಆಯಿತು, ನಾಳೆ ಕೊಡುತ್ತೇನೆ. ಈಗ ಪ್ರಶ್ನೋತ್ತರ. ಶ್ರೀ ಹೆಚ್.ಸಿ. ಬಾಲಕೃಷ್ಣ ರವರ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರಂತೆ. ಆಮೇಲೆ ಶ್ರೀ ಬಸವರಾಜ್ ನೀಲಪ್ಪ ಶಿವಣ್ಣನವರ್ ರವರು ಕೇಳಿರುವ ಪ್ರಶ್ನೆ ಸಮಾಜ ಕಲ್ಯಾಣ ಇಲಾಖೆಗೆ ವರ್ಗಾವಣೆಯಾಗಿದೆ. ಈಗ ಶ್ರೀ ಕೆ.ಜಿ. ಬೋಪಯ್ಯ ರವರ ಪ್ರಶ್ನೆ.

ವಕೀಲರಿಗಾಗಿ ನೀಡುವ ಪ್ರೋತ್ಸಾಹಧನ

168 (2736); ಶ್ರೀ ಬೋಪಯ್ಯ ಕೆ. ಜಿ. (ವಿರಾಜಪೇಟೆ)

ಅ) ಹೊಸದಾಗಿ ವಕೀಲಿ ವೃತ್ತಿ ಪ್ರಾರಂಭಿಸಲು ಯಾವ ಯಾವ ವರ್ಗದ ವಕೀಲರಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ; ನೀಡಲಾಗುತ್ತಿರುವ ಪ್ರೋತ್ಸಾಹಧನದ ಮೊತ್ತವೆಷ್ಟು;

ಆ) ಪ್ರಸ್ತುತ ಈ ಪ್ರೋತ್ಸಾಹಧನವನ್ನು ಎಷ್ಟು ಜನರಿಗೆ ನೀಡಲಾಗುತ್ತಿದೆ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಾನೂನು ಪದವೀಧರರು ಸಮಾಜ ಕಲ್ಯಾಣ

ಇಲಾಖೆ ಹಿಂದುಳಿದ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಮೂಲಕ ಪ್ರೋತ್ಸಾಹ ಧನವನ್ನು ಪಡೆಯುತ್ತಿದ್ದಲ್ಲಿ ಅವರನ್ನು ಹೊರತುಪಡಿಸಿ, ಕಾನೂನು ಇಲಾಖೆಯಡಿ ಜಾರಿಗೊಳಿಸುತ್ತಿರುವ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿ ಹಾಗೂ ತಾಲ್ಲೂಕು ಮಟ್ಟದ ತಹಶೀಲ್ದಾರ್ ನೇತೃತ್ವದ ಆಯ್ಕೆ ಸಮಿತಿಗಳ ಮೂಲಕ ಎಲ್ಲಾ ವರ್ಗಗಳ ಕಾನೂನು ಪದವೀಧರರಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

2006ನೇ ಸಾಲಿನಲ್ಲಿ ಮಾಹೆಯಾನ ₹ 1,000/– ಗಳಂತೆ 12 ತಿಂಗಳಿಗೆ ಮಾತ್ರ ಸೀಮಿತಗೊಳಿಸಿ ಪ್ರೋತ್ಸಾಹಧನ ನೀಡಲಾಗಿದೆ.

2007ನೇ ಸಾಲಿನಿಂದ ಮಾಹೆಯಾನ ₹ 1,000/– ಗಳಂತೆ 24 ತಿಂಗಳಿಗೆ ಸೀಮಿತಗೊಳಿಸಿ ಪ್ರೋತ್ಸಾಹಧನ ನೀಡಲಾಗುತ್ತಿದೆ.

₹ 1,000/– ಗಳಂತೆ ನೀಡುತ್ತಿರುವ ಪ್ರೋತ್ಸಾಹಧನವನ್ನು 2015–16 ನೇ ಸಾಲಿನಿಂದ ₹ 2,000/– ಗಳಿಗೆ ಹೆಚ್ಚಿಸಲಾಗಿದೆ.

ಆ) ಪ್ರಸ್ತುತ 2616 ಜನರಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

(ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಅನುಬಂಧ

ಜಿಲ್ಲೆಗಳಲ್ಲಿ ಪ್ರಸ್ತುತ ಪ್ರೋತ್ಸಾಹ ಧನ ಪಡೆಯುತ್ತಿರುವ ಫಲಾನುಭವಿಗಳ ವಿವರಗಳು

ಕ್ರ ಸಂ	ಜಿಲ್ಲೆಯ ಹೆಸರು	ಪ್ರೋತ್ಸಾಹ ಧನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ	ಷರಾ
1	ದಂಗಳೂರು ನಗರ	214	——
2	ದಂಗಳೂರು ಗ್ರಾಮಾಂತರ	00	ಪ್ರಸ್ತುತ ಈ ಯೋಜನೆಯಡಿ ಪ್ರೋತ್ಸಾಹ ಧನ ಕೋರಿ ಅರ್ಜಿ ಸ್ವೀಕೃತವಾಗಿರುವುದಿಲ್ಲ
3	ಬಾಗಲಕೋಟೆ	516	——
4	ಬೆಳಗಾವಿ	172	——
5	ಬಳ್ಳಾರಿ	23	——
6	ಬೀದರ್	12	——
7	ವಿಜಯಪುರ	100	——
8	ಚಾಮರಾಜನಗರ	10	——
9	ಚಿಕ್ಕಬಳ್ಳಾಪುರ	00	ಪ್ರಸ್ತುತ 20 ನವ ವಧೀಲರು ಪ್ರೋತ್ಸಾಹ ಧನ ಕೋರಿ ಅರ್ಜಿ ಸಲ್ಲಿಸಿದ್ದು ಸದರಿ ವಧೀಲರುಗಳು ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಗಳಲ್ಲಿ ಪ್ರೋತ್ಸಾಹ ಧನ ಪಡೆಯುತ್ತಿರುವುದು ಜಿಲ್ಲಾಧಿಕಾರಿಗಳ ಅವ್ಯಕ್ತಕೆಯಲ್ಲಿನ ಸಮಿತಿಯ ಗಮನಕ್ಕೆ ಬಂದಿರುವುದರಿಂದ ಈ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ
10	ಚಿಕ್ಕಮಗಳೂರು	10	——
11	ಚಿತ್ರದುರ್ಗ	14	——
12	ದಕ್ಷಿಣ ಕನ್ನಡ (ಮಂಗಳೂರು)	41	——
13	ದಾವಣಗೆರೆ	64	——
14	ಧಾರವಾಡ	66	——
15	ಗದಗ	03	——
16	ಕಲಬುರಗಿ	13	——
17	ಹಾಸನ	16	——

18	ಹಾವೇರಿ	18	——
19	ಕೊಡಗು (ಮಡಿಕೇರಿ)	00	ಸಂಖ್ಯೆ: ಲಾ 39 ಎಲ್‌ಎಜೆ 2014, ದಿನಾಂಕ: 05/07/2014ರ ಸರ್ಕಾರಿ ಆದೇಶದ ಮಾರ್ಗಸೂಚನೆಗಳನ್ವಯ ಪ್ರಸ್ತುತ ಅರ್ಹ ಫಲಾನುಭವಿಗಳಿಂದ ಅರ್ಜಿ ಸ್ವೀಕೃತವಾಗಿರುವುದಿಲ್ಲ
20	ಕೋಲಾರ	406	——
21	ಕೊಪ್ಪಳ	62	——
22	ಮಂಡ್ಯ	00	ಸಂಖ್ಯೆ: ಲಾ 39 ಎಲ್‌ಎಜೆ 2014, ದಿನಾಂಕ 05/07/2014ರ ಸರ್ಕಾರಿ ಆದೇಶದ ಮಾರ್ಗಸೂಚನೆಗಳನ್ವಯ ಪ್ರಸ್ತುತ ಅರ್ಹ ಫಲಾನುಭವಿಗಳಿಂದ ಅರ್ಜಿ ಸ್ವೀಕೃತವಾಗಿರುವುದಿಲ್ಲ
23	ಮೈಸೂರು	79	——
24	ರಾಯಚೂರು	69	——
25	ರಾಮನಗರ	00	——
26	ಶಿವಮೊಗ್ಗ	420	——
27	ತುಮಕೂರು	160	——
28	ಉಡುಪಿ	01	(ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಾನೂನು ಪದವೀಧರರು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಮೂಲಕ ಪ್ರೋತ್ಸಾಹ ಧನವನ್ನು ಪಡೆಯುತ್ತಿದ್ದು ಈ ಯೋಜನೆಯಡಿ ಪ್ರಸ್ತುತ ಒಬ್ಬರಿಗೆ ನೀಡಲಾಗುತ್ತಿದೆ)
29	ಉತ್ತರ ಕನ್ನಡ (ಕಾರವಾರ)	12	——
30	ಯಾದಗಿರಿ	115	——
	ಒಟ್ಟು:	2616	——

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಇತರ ವರ್ಗದ್ದು, ಎಸ್.ಸಿ/ಎಸ್.ಟಿ, ಹಿಂದುಳಿದ ವರ್ಗದವರದ್ದು ಬಿಟ್ಟು ಇತರೆ ವರ್ಗದವರಿಗೂ ಕೊಡುತ್ತೇವೆ ಎಂದಿದ್ದಾರೆ. ಅವರಿಗೇನು ಅರ್ಹತೆ, requirement ಏನೆಂಬುದನ್ನು ಸ್ವಲ್ಪ ಹೇಳಲಿ. ನೀವು ಜಿಲ್ಲಾವಾರು ವಿವರ ಕೊಟ್ಟಿದ್ದೀರಿ. ನಮ್ಮ ಜಿಲ್ಲೆಯದನ್ನೇ ತೆಗೆದುಕೊಂಡರೆ ಸರ್ಕಾರಿ ಆದೇಶ, ಮಾರ್ಗಸೂಚಿಗಳನ್ವಯ ಪ್ರಸ್ತುತ ಅರ್ಹ ಫಲಾನುಭವಿಗಳಿಂದ ಅರ್ಜಿ ಸ್ವೀಕೃತವಾಗಿರುವುದಿಲ್ಲ ಎಂದು ಇದೆ. ಅದೇನು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಇದರಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ, ಆ ಇಲಾಖೆಯವರು ಕೂಡಾ ಈ ಸವಲತ್ತುಗಳನ್ನು ಕೊಡುತ್ತಿದ್ದಾರೆ. ಅಲ್ಲಿ ಕೊಡುತ್ತಿರುವ ಸವಲತ್ತಿಗೂ, ನಮಗೂ ಸ್ವಲ್ಪ ವ್ಯತ್ಯಾಸವಿದೆ. ಈಗ ಈ ವರ್ಷದಲ್ಲಿ ಮಾತ್ರ ಒಂದು ಸಾವಿರ ರೂ. ಗಳ ಬದಲು ಎರಡು ಸಾವಿರ ರೂಪಾಯಿ ನಾವು ಮಾಡಿದ್ದೇವೆ. ಹಾಗಾಗಿ ಅಲ್ಲಿ ಯಾರೂ ಕೂಡಾ ಸಿಗದ ಸಂದರ್ಭದಲ್ಲಿ ಮಾತ್ರ ನಮ್ಮ ಬಳಿ ಅರ್ಜಿ ಹಾಕುತ್ತಾರೆ ವಿನಃ ಬಹುತೇಕ ಅವರೆಲ್ಲರೂ ಅಲ್ಲಿಯೇ ಅರ್ಜಿ ಹಾಕುವುದು. ಕೆಲವು ಇಲಾಖೆಗಳಲ್ಲಿ ಎರಡು ವರ್ಷಕ್ಕೆ ಅವಕಾಶವಿದೆ. ಕೆಲವು ಇಲಾಖೆಗಳಲ್ಲಿ 4 ವರ್ಷಕ್ಕೆ ಅವಕಾಶವಿದೆ. ಕೆಲವರಿಗೆ ಒಂದು ಸಾವಿರ ರೂಪಾಯಿಗಳಿಗೆ ಅವಕಾಶವಿದೆ. ಕೆಲವರಿಗೆ 2 ಸಾವಿರ ರೂಪಾಯಿಗಳಿಗೆ ಅವಕಾಶವಿದೆ. ಈ ರೀತಿ ಒಂದೊಂದು ಇಲಾಖೆಯಲ್ಲಿ ಒಂದೊಂದು ರೀತಿಯಾಗಿದೆ. ಅವರವರ ಅನುಕೂಲ ನೋಡಿಕೊಂಡು ಮಾಡುತ್ತಾರೆ, ಇಲ್ಲಿ ಅವರಿಗೆ ಎಲ್ಲೂ ಸಿಗದಿರುವ ಸಂದರ್ಭದಲ್ಲಿ ಮಾತ್ರ ನಮ್ಮ ಹತ್ತಿರ ಅರ್ಜಿ ಹಾಕುತ್ತಾರೆ. ಆದರೆ ಒಂದು ವಿಷಯ ತಮಗೆ ಹೇಳುವುದೇನೆಂದರೆ, ಇಲ್ಲಿ ಕೊಡುವುದು ಏನೇನೂ ಸಾಲದೆಂದು ಒಂದು ಸಾವಿರ ಇದ್ದದ್ದನ್ನು ಎರಡು ಸಾವಿರ, ಎಡು ವರ್ಷದವರೆಗೆ ಮಾಡಿದ್ದೇವೆ. ಇದಕ್ಕೆ ಸಾಕಷ್ಟು ಮೀಸಲಾತಿ ಹಣವಿದೆ. 2014–15 ನೇ ಸಾಲಿನಲ್ಲಿ ನಾಲ್ಕೂ ಕೋಟಿ ಇಟ್ಟಿದ್ದೇವೆ. ಪ್ರತಿ

ವರ್ಷ ಜಿಲ್ಲಾಧಿಕಾರಿಗಳಿಗೆ ಹಣ ಖರ್ಚಾಗುತ್ತಿಲ್ಲವೆಂದು ಹೇಳುತ್ತಿದ್ದೇವೆ, ಈಗ ಹಣ ಖರ್ಚು ಆಗುತ್ತಿದೆ, ತಮ್ಮ ಪ್ರಶ್ನೆ, ಈ ವರ್ಗದವರು ಬಿಟ್ಟು ಬೇರೆ ವರ್ಗದವರಿಗೆ ಏತಕ್ಕೆ ಕೊಡಬಾರದೆನ್ನುವುದಾಗಿದೆ.

ಅಧ್ಯಕ್ಷರು:– ನಿಮ್ಮ ಉದ್ದೇಶವೇನಿತ್ತು ಆ ಪ್ರಶ್ನೆಯನ್ನೇ ಕೇಳಲಿಲ್ಲವಲ್ಲಾ?

ಶ್ರೀ ಟಿ.ಬಿ. ಜಯಚಂದ್ರ:– ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಈ ಯೋಜನೆ ಬಗ್ಗೆ ಒಂದು ಆದೇಶವಿದೆ, ಅದನ್ನು ಸಹ ತಮಗೆ ಕಳುಹಿಸಿಕೊಡುತ್ತೇನೆ. ಅದರಲ್ಲಿ ನನಗನಿಸುವುದು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ, ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರ ಅಧ್ಯಕ್ಷತೆಯಲ್ಲಿ ಇದೆ, Bar Association ಅಧ್ಯಕ್ಷರು ಅವರೆಲ್ಲರೂ ಕೂಡ ಇರುತ್ತಾರೆ. ಮುಖ್ಯವಾಗಿರುವ ಪ್ರಶ್ನೆ ಏನೆಂದರೆ, ಬೇರೆಯವರಿಗೂ ಕೂಡ ಕೊಡಬೇಕೆನ್ನುವುದು. ಅದು ಈಗಿರುವ ಆದೇಶದ ಇತಿಮಿತಿಯಲ್ಲಿ ಕಷ್ಟವಾಗುತ್ತದೆ, ಮುಂದೆ ನೋಡೋಣ.

ಶ್ರೀ ಕೆ.ಜಿ. ಬೋಪಯ್ಯ:– Minimum ₹ 5,000 ಕೊಡಿ. ನೀವು ₹ 2,000 ಕೊಟ್ಟರೆ ಅವರು ಏನು practice ಮಾಡುತ್ತಾರೆ?

ಶ್ರೀ ಟಿ.ಬಿ. ಜಯಚಂದ್ರ:– ನಾವು ಈಗಾಗಲೇ ಯುವ ವಕೀಲರಿಗೆ ತರಬೇತಿ ಕೊಡಬೇಕೆನ್ನುವ ಒಂದು ಗುರಿಯನ್ನಿಟ್ಟುಕೊಂಡು, Advocates Academy ಮಾಡಬೇಕೆಂದು ಒಂದು ತೀರ್ಮಾನ ಮಾಡಿದ್ದೇವೆ, Judicial Academy ಜೊತೆಗೆ understanding ಮಾಡಿಕೊಂಡಿರುವ ಹಿನ್ನೆಲೆಯಲ್ಲಿ, ₹ 2,000 ಜೊತೆಗೆ ಕಡ್ಡಾಯವಾಗಿ Advocates Academy and Judicial Academy ಮಾಡಬೇಕಾಗಿದೆ.

ಅಧ್ಯಕ್ಷರು:– ಅಕಾಡೆಮಿ ಬಂದಾದ ಮೇಲೆ ಹೇಳಿ, ಈಗ ಅವರಿಗೆ ಜಾಸ್ತಿ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇವೆಂದು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಅವರಿಗೆ ಜಾಸ್ತಿ ಮೊತ್ತ ಕೊಡುವುದಕ್ಕಿಂತ ಜಾಸ್ತಿ ಅವರಿಗೆ ಇಲ್ಲಿ education facilities ಕೂಡ ಕೊಡುತ್ತಿದ್ದೇವೆ.

ಅಧ್ಯಕ್ಷರು:- ವಿಶ್ವನಾಥ್ ಚಂದ್ರಶೇಖರ್ ಮಾಮನಿ ಇಲ್ಲ,

ಧಾರವಾಡದಲ್ಲಿ ಸ್ಟೀಲ್ ಉದ್ದಿಮೆ ಸ್ಥಾಪನೆ

170 (3317); ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ (ರೋಣ)

ಅ) ಭಾರತ ಸರ್ಕಾರವು SAIL ಮತ್ತು Arcelor Mittal ಸಹಯೋಗದಲ್ಲಿ ಧಾರವಾಡದಲ್ಲಿ ₹ 5000 ಕೋಟಿಗಳ ಅಂದಾಜು ವೆಚ್ಚದಲ್ಲಿ ಸ್ಟೀಲ್ ಉದ್ದಿಮೆಯನ್ನು ಪ್ರಾರಂಭಿಸಲು ಇಚ್ಛಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಉದ್ದಿಮೆಗೆ ಎಷ್ಟು ಎಕರೆ ಜಮೀನು ಮತ್ತು ಯಾವ ಯಾವ ಇತರೆ ಸೌಲಭ್ಯಗಳನ್ನು ಕೋರಿರುತ್ತಾರೆ;

ಇ) ಈ ಕುರಿತು ಸರ್ಕಾರದ ನಿರ್ಧಾರವೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಗಳು)

ಅ) ಭಾರತ ಸರ್ಕಾರವು SAIL ಮತ್ತು Arcelor Mittal ಸಹಯೋಗದಲ್ಲಿ ಧಾರವಾಡದಲ್ಲಿ ₹ 5000 ಕೋಟಿಗಳ ಅಂದಾಜು ವೆಚ್ಚದಲ್ಲಿ ಸ್ಟೀಲ್ ಉದ್ದಿಮೆಯನ್ನು ಸ್ಥಾಪಿಸುವ ಸಂಬಂಧ ರಾಜ್ಯ ಸರ್ಕಾರಕ್ಕೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಈ ಸಂಬಂಧ ಸದರಿ ಕಂಪನಿಯಿಂದ / SAIL ನಿಂದ ಉಕ್ಕು ಕಾರ್ಖಾನೆ ಸ್ಥಾಪನೆಗೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತಿಯಾದಲ್ಲಿ, ಸದರಿ ಘಟಕಕ್ಕೆ ಅವಶ್ಯವಿರುವ ಮೂಲಭೂತ ಸೌಕರ್ಯ ಮತ್ತು ಇತರೆ ಪ್ರೋತ್ಸಾಹಗಳನ್ನು ನೀಡಲು ನಿಯಮಾನುಸಾರ ಪರಿಶೀಲಿಸಲಾಗುವುದು.